# ದೂರಶಿಕ್ಷಣ ನಿರ್ದೇಶನಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಅಧ್ಯಯನ ಕೇಂದ್ರ ಸಂಯೋಜಕರಿಗೆ ಸೂಚನೆಗಳು

1. ದೂರಶಿಕ್ಷಣ ನಿರ್ದೇಶನಾಲಯದ ವತಿಯಿಂದ ಅನುಮೋದನೆ ಪಡೆದಿರುವ ಕೇಂದ್ರದ ವಿದ್ಯಾರ್ಥಿಗಳ ವಾರ್ಷಿಕ ಕಾರ್ಯಕ್ರಮವನ್ನು ಯಾವುದೇ ತೊಂದರೆಯಾಗದಂತೆ ನಿರ್ವಹಿಸಬೇಕು.
2. ಈ ಸಾಲಿನಲ್ಲಿ ವಿದ್ಯಾರಣ್ಯ ಕೇಂದ್ರವೂ ಸೇರಿದಂತೆ ಒಟ್ಟು 07 ಪರೀಕ್ಷಾ ಕೇಂದ್ರಗಳಲ್ಲಿ ದೂರಶಿಕ್ಷಣ ಪರೀಕ್ಷೆಗಳನ್ನು ನಡೆಸಲಾಗುತ್ತದೆ.
3. ಪರೀಕ್ಷೆಗಳನ್ನು ಕ್ರಮಬದ್ಧವಾಗಿ ನಡೆಸುವುದು. ಸಂಯೋಜಕರು ಮತ್ತು ಕೊಠಡಿ ಮೇಲ್ವಿಚಾರಕರು ಈ ವಿಷಯದಲ್ಲಿ ಪೂರ್ಣವಾಗಿ ಸಹಕಾರ ನೀಡುವುದು.
4. ಪರೀಕ್ಷಾ ವಿಷಯದಲ್ಲಿ ಯಾವುದೇ ರೀತಿಯ ಕ್ರಮಲೋಪವನ್ನು ವಿಶ್ವವಿದ್ಯಾಲಯವು ಸಹಿಸುವುದಿಲ್ಲ. ಏನೇ ಗಂಭೀರ ಕ್ರಮಲೋಪವಾದರೂ ಅದರ ಹೊಣೆಯು ಆಯಾ ಪರೀಕ್ಷಾ ಕೇಂದ್ರಗಳದ್ದಾಗಿರುತ್ತದೆ.
5. ಯಾವುದೇ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಸಾಮೂಹಿಕ ನಕಲು ಮಾಡುವುದು ಕಂಡುಬಂದಲ್ಲಿ ಆ ಪರೀಕ್ಷಾ ಕೇಂದ್ರವನ್ನು ಮುಂದಿನ ಸಾಲಿನಿಂದ ಸ್ಥಗಿತಗೊಳಿಸಲಾಗುವುದು.
6. ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಕೊಠಡಿಗಳನ್ನು ಅಕ್ಕಪಕ್ಕದಲ್ಲಿ ಬರುವಂತೆ ವ್ಯವಸ್ಥೆ ಮಾಡಿರಬೇಕು. ಕೆಳಗಿನ ಅಂತಸ್ತಿನಲ್ಲಿಯೇ ಆದಷ್ಟು ವ್ಯವಸ್ಥೆ ಮಾಡಬೇಕು.
7. ಪರೀಕ್ಷೆಗಳನ್ನು ವ್ಯವಸ್ಥೆ ಮಾಡಲು ಬಂದಿರುವ ವಿಶ್ವವಿದ್ಯಾಲಯದ ಪರೀಕ್ಷಾಧಿಕಾರಿಗಳಿಗೆ ಪರೀಕ್ಷಾ ಕೇಂದ್ರದ ಸಂಯೋಜಕರುಗಳು ಪೂರ್ಣ ಸಹಕಾರ ನೀಡಿ ಯಾವುದೇ ಕ್ರಮಲೋಪ ಆಗದ ಹಾಗೆ ಸಹಕರಿಸಬೇಕು.
8. ನಿಮಗೆ ಕೊಟ್ಟಿರುವ ಕೊಠಡಿ ಮೇಲ್ವಿಚಾರಕರ ಸೂಚನೆಗಳನ್ನು, ಕೊಠಡಿ ಮೇಲ್ವಿಚಾರಕರು ತಪ್ಪದೇ ಪಾಲಿಸಲು ಸೂಚಿಸಬೇಕು.
9. ಪರೀಕ್ಷಾ ಕೇಂದ್ರಕ್ಕೆ ಸಂಲಗ್ನಗೊಳಿಸಿರುವ ಬೇರೆ ಬೇರೆ ಕೇಂದ್ರಗಳ ಸಂಯೋಜಕರುಗಳು ತಮ್ಮ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯಲ್ಲಿಯೂ ಅಶಿಸ್ತಿನಿಂದ ನಡೆದುಕೊಳ್ಳದಂತೆ ಮಾರ್ಗದರ್ಶನ ಮಾಡಬೇಕು.
10. ಎಲ್ಲಾ ಪರೀಕ್ಷಾ ಕೇಂದ್ರಗಳವರು ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಬೇಕು.
11. ಪರೀಕ್ಷಾ ಕೇಂದ್ರದವರು ಆರಕ್ಷಕ ಠಾಣೆಗೆ ಪರೀಕ್ಷಾ ವಿಚಾರವನ್ನು ತಿಳಿಸಿ ಸೂಕ್ತ ರಕ್ಷಣೆಗೆ ಕ್ರಮವಹಿಸಲು ಕೋರುವುದು. ಆರಕ್ಷಕ ಠಾಣೆಗೆ ವರದಿ ಮಾಡಿದ ಪ್ರತಿಯೊಂದನ್ನು ವಿಶ್ವವಿದ್ಯಾಲಯಕ್ಕೆ ದಿನಾಂಕ 25.10.2019ರ ಒಳಗೆ ಕಳುಹಿಸಿಕೊಡಬೇಕು.

ನಿರ್ದೇಶಕರು 26/9/19